ಫಾರೆಸ್ಟ್ ಇಲಾಖೆ.

ತಾರೀಖು 19ನೇ ಜನವರೀ 1887ನ: ಇಸವಿ.

ಸ್ ೧೮೭೮ನೇ ಇಸವಿ ಜೂ೯ 8ನೇ ಮುಕ್ತಮಿನ ಫಾರೆಸ್ಟ್ ರೂಲ್ಸಿನ 13ನೇ ನಿಬಂಧನೆಗಳನುಸರಿಸಿ ಇದರಿಂದ ನಮೂದಾದ ಸರಕಾರಿ ಜಂಗ್ಲಿಗಳನ್ನು ಮತ್ತು ಪ್ಲಾಂಟೇಷ್ಣಗಳನ್ನು ಸ್ ೧೮೮೭ನೇ ಇಸವಿ ಫಿಬ್ರವರೀ ಗುಯ್ಕೇ ಲಾಗಾಯತು 1887ನೇ ಇಸವಿ ಮೇ ಅಖೈರ್ ತಾರೀಖು ವರಿಗೆ ಬ್ಯಾಟೆಗಾರರುಗಳಿಗೂ ಇತರ ಜನಗಳಿಗೂ ಬಂದು ಮಾಡಲ್ಪಟ್ಟಿರುವೆ.

ಫಾರೆಸ್ಟ್.	ಪ್ಲಾಂಟೇಷ್ಣ.	ತಾಲ್ಲೂಕು.
ಲಕ್ಕುವಳ್ಳಿ ಸ್ಟೇಟ್ ಫಾರೆಸ್ಟ್	ಲಕ್ಕುವಳ್ಳಿ ಟೀಕ್ ಪ್ಲಾಂಟೇಷ್ಣ.	ತರಿಕೆರೆ ತಾಲ್ಲೂಕು.
ಸಖ್ಕರೆಬೈಲು ಡಿಟೋ	ಸಖ್ಕರೆ ಬೈಲ್ ಟೀಕ್ ಪ್ಲಾಂಟೇಷ್ಣ	ನರಸೊಗ್ಗಾ ಡಿಟೋ.
ಕೆಂಕರಗುಡ್ಡಾ ಡಿಟೋ	ಅಲಕೊಳ ಸಂದಲ್ ಪ್ಲಾಂಟೇಷ್ಣ	ಡಿಟೋ ಡಿಟೋ.
ಭೂತನ ಬೈಲು ಡಿಟೋ	ಡಿಟೋ	ಡಿಟೋ
	ಅನವೆನಕಟ್ಟೆ ಸಂದ್ಲು ಪ್ಲಾಂಟೇಷ್ಣ	ಡಿಟೋ
	ಹೆಬ್ಬೆ ಟೀಕ್ ಪ್ಲಾಂಟೇಷ್ಣ	ಕೊಪ್ಪಾ ತಾಲ್ಲೂಕು.

ಇ. ಪಿ. ಲೌರಿ,
ಅಸಿಸ್ಟೆಂಟ್ ಕ್ಷ ಸರ್ವೇಯರ್ ಫಾರೆಸ್ಟ್ಸ್.

ನಗರ ಡಿವೀಜ್ಞ.

ನಗರ ಡಿವೀಜ್ಞ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 9.

ಮೃತಪಟ್ಟ ಮುಲ್ಲಾಸೈಫುದ್ದಿ ಖಾನನ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಅಸಲಂಖಾನ್ ಕಂಧಾರಿ, ಮೃತಪಟ್ಟ ಸದರೀ ಮುಲ್ಲಾಸೈಫುದ್ದಿಖಾನರಿಗೆ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಶಿಕಾರೀಪುರದ ಸ್ಥಳದ ಅಸಲಂಖಾನನು ಶಿಕಾರೀಪುರದ ವಾಸಸ್ಥರಾಗಿ ಧಾರವಾಡಜಿಲ್ಲಾ ಸಿಗ್ಗಾಮಿತಾಲ್ಲೂಕು ಖಂಕಾಪುರದಲ್ಲಿ ಮೃತಪಟ್ಟ ಮುಲ್ಲಾಸೈಫುದ್ದಿ ಖಾನನ ಜೆಂದಗಿ ಬಗ್ಯಾಗಿ ಬರತಕ್ಕ 1,000 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಅಸಲಂಖಾನನ ಅರ್ಜೀಯನ್ನು 1887ನೇ ಇಸವಿ ಮಾರ್ಚೀ ತಿಂಗಳು ತಾರೀಖು 1ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮುಲ್ಲಾಸೈಫುದ್ದಿಖಾನರ ಆಸ್ತಿಗೆ ಹಕ್ಕುದಾರರಾದ ವಿಸಿಸ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಅರ್ಜೀ ನಂಬರ್ 12.

ಮೃತಪಟ್ಟ ಮಲ್ಲೇಗೌಡನ ಆಸ್ತೀ ವಿಷಯದಲ್ಲಿ.—

ಅರ್ಜೀದಾರ ಪರವೇಗೌಡ, ಮೃತಪಟ್ಟ ಸದರೀ ಮಲ್ಲೇಗೌಡನಿಗೆ ತಮ್ಮನು ಆಗಬೇಕೆಂಬ ಹಕ್ಕುದಾರೀ ಮೇಲೆ ಚಿಕ್ಕಮಗಳೂರು ತಾಲ್ಲೂಕು ಅರಳಗುಪ್ಪೆ ಸ್ಥಳದ ಪರವೇಗೌಡನು, ಚಿಕ್ಕಮಗಳೂರು ತಾಲ್ಲೂಕು ಅರಳಗುಪ್ಪೆ ವಾಸಸ್ಥನಾಗಿ ಮೃತಪಟ್ಟ ಮಲ್ಲೇಗೌಡನ ಜೆಂದಗಿ ಬಗ್ಯಾಗಿ ಬರತಕ್ಕ 1,000 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಪರವೆಗೌಡನ ಅರ್ಜೀಯನ್ನು 1 87ನೇ ಇಸವಿ ಮಾರ್ಚೀ ತಿಂಗಳು ತಾರೀಖು 1ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮಲ್ಲೇಗೌಡನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಮಿದರಿಂದ ತಿಳಿಯಪಡಿಸಿ ಯಿದೆ.

1837ನೇ ಯಿಸವಿ ಜನವರೀ ತಿಂಗಳು 29ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ